(SRI T. CHANNIAH.)

LIST II.

Names of villages in which acquisition proceedings have been delayed for Harijan Colonies.

Bangalore South.	*Doddaballapura Taluk.*
1 Belur Nagasandra	1 Malinayaka Mandanahalli
2 Kumbalagud	2 Veerabhadranapalya
3 Thalaghattapura	3 Kasaghatta
4 Marathahalli	4 Melkote
5 Venkatapura	5 Alahalli
6 Vittasandra	6 Byappanahalli
7 Thippasandra	
8 Nayakappasettypaly	
9 Bansavadi	

ಶ್ರೀ ಆರ್. ಮುನಿಸ್ವಾಮಯ್ಯ.—ಹರಿಜನರ ಕಾಲೊನಿಗಳ ಅಕ್ವಿಜಿಷ್ಟ್ ಕೇಸುಗಳು ಏಳು ವರ್ಷಗಳಿಂದಲೂ ಸರ್ಕಾರದಲ್ಲಿ ಮತ್ತು ಕೆಲವು ರೆವೆನ್ಯೂ ಆಫೀಸುಗಳಲ್ಲಿ ಪೆಂಡಿಂಗ್ ಆಗಿವೆಯಲ್ಲವೆ?

ಶ್ರೀ ಟಿ. ಚನ್ನಯ್ಯ.—ಇಲ್ಲ; ಏಳು ವರ್ಷಗಳಿಂದ ಪೆಂಡಿಂಗ್ ಆಗಿವೆಯೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಕೆಲವು ವರ್ಷಗಳಿಂದ ಪೆಂಡಿಂಗ್ ಆಗಿವೆಯೆಂದು ಗೊತ್ತಾಗಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಹಾಗಾದರೆ ಎಷ್ಟು ವರ್ಷಗಳಿಂದ ತಡವಾಗಿವೆ?

ಶ್ರೀ ಟಿ. ಚನ್ನಯ್ಯ.—ನೋಟೀಸ್ ಬೇಕು.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಅಕ್ವಿಜಿಷ್ಟ್ ಕೇಸುಗಳನ್ನು ಜಾಗ್ರತೆ ಫೈನಲು ಮಾಡುವುದಕ್ಕೆ ಒಂದು ಕ್ವಾರ್ಟರ್ಲಿ ಸ್ಟೇಟ್‌ಮೆಂಟನ್ನು ಮಂತ್ರಿಗಳು ತರಿಸುವುದು ಒಳ್ಳೆಯದಲ್ಲವೆ?

Sri T. CHANNIAH.—I will examine this point.

Foodgrains of Red Cross Organisation in Government Depots.

Q.—557. Sri R. MUNISWAMIAH (Bangalore North—Scheduled Castes)—

Will the Government be pleased to state :—

(*a*) the quantity of grain kept in deposit in the Mysore Government depots by the Mysore State Branch of the Red Cross Organisation from November 1952 to November 1953;

(*b*) the quantity of grain taken back by the Red Cross Organisation during the above period;

(*c*) the quantity of grain still remaining with the Government;

(*d*) when they are going to settle this account?

A.—Sri T. CHANNIAH (Minister for Public Health and Local Self-Government)—

		Tons.	*Cwts.*	*Qrs.*	*Lbs.*
(*a*) Rice	...	941	12	3	18
Wheat	...	2,025	9	1	12
(*b*) Rice	...	806	19	1	12
Wheat	...	1,997	1	2	8
(*c*) Rice	...	134	13	2	6
Wheat	...	30	7	3	2

(*d*) Action is being taken to finalise the accounts expeditiously.

ಶ್ರೀ ಆರ್. ಮುನಿಸ್ವಾಮಯ್ಯ.—(*c*) ಭಾಗದ ಪ್ರಶ್ನೆಗೆ ಉತ್ತರವಾಗಿ 134 ಟನ್ನು ಅಕ್ಕಿ, 30 ಟನ್ನು ಗೋಧಿ ಸರ್ಕಾರದಲ್ಲಿ ಇನ್ನೂ ಉಳಿದಿದೆಯೆಂದು ಹೇಳಿದೆ. ಅದನ್ನು ರೆಡ್‌ಕ್ರಾಸ್ ಸಂಸ್ಥೆಯವರು ವಾಪಸು ಕೊಡಿ ಎಂದು ಈಗ ಕೇಳಿದರೆ ಹಿಂದಕ್ಕೆ ಕೊಡುವುದಕ್ಕೆ ಸಾಧ್ಯವಿಲ್ಲವೆ?

ಶ್ರೀ ಟಿ. ಚನ್ನಯ್ಯ.—ಸಾಧ್ಯವಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಏಕೆ ಸಾಧ್ಯವಿಲ್ಲ?

ಶ್ರೀ ಟಿ. ಚನ್ನಯ್ಯ.—ರೆಡ್‌ಕ್ರಾಸ್ ಸಂಸ್ಥೆಯವರು ಪರ್ಮಿಷ್ಟ್ ತೆಗೆದುಕೊಂಡು ಈಗಿನ ದರದ ಪ್ರಕಾರ ವಾರಾಟ ಮಾಡಬಹುದು.

ಶ್ರೀ ಆರ್. ಮುನಿಸ್ವಾಮಯ್ಯ.—ಅವರು ಈ ಧಾನ್ಯ ಹಿಂದಕ್ಕೆ ಕೊಡಬೇಕೆಂದು ತಮಗೆ ಬರೆದಿಲ್ಲವೆ?

ಶ್ರೀ ಟಿ. ಚನ್ನಯ್ಯ.—ಇಲ್ಲ.

Iron and Steel Works, Bhadravathi (quota supplied to).

Q.—447. Sri K. PANCHAKSHARIAH (Arsikere).—

Will the Government be pleased to state.—

(*a*) the quota (in tonnage) that was supplied to the State from the

Iron and Steel Works at Bhadravathi during the years 1952-53, 1953-54 and 1954-55;

(*b*) the quota (in tonnage) given to all-India use;

(*c*) whether it has come to their notice that much discrimination has been shown in the allotment of quota for the State?

A.—Sri H. SIDDAVEERAPPA (Minister for Home and Finance).—

(*a*)—

	Non-Agricultural Quota (*Tons*)	*Agricultural Quota* (*Tons*)
1952-53 ...	7,931	Not available
1953-54 ...	8,014	200
1954-55 ...	10,264	195

(*b*) Information is not available.

(*c*) No.

ಶ್ರೀ ಕೆ. ಪಂಚಾಕ್ಷರಯ್ಯ.—ವ್ಯವಸಾಯಕ್ಕೆ ಸಂಬಂಧಪಟ್ಟಿರುವ ಸಾಮಾನುಗಳು ಯಾವುವು ನರಬರಾಯಿ ಆಗುತ್ತಿವೆ?

*ಶ್ರೀ ಎಚ್. ಸಿದ್ದವೀರಪ್ಪ.—ಆ ತಪಶೀಲಲ್ಲಿ. ಗಾಡಿ ಪಟ್ಟೆ, ಅಚ್ಚು, ಗುಳ, ಮುಂತಾದುವೆಲ್ಲ ಸೇರಿವೆ.

ಶ್ರೀ ಕೆ. ಪಂಚಾಕ್ಷರಯ್ಯ.—ವ್ಯವಸಾಯಕ್ಕೆ ಅನುಕೂಲವಾಗುವ ಗುಳ, ಅಚ್ಚು ಮುಂತಾದ ಸಾಮಾನುಗಳು ಮಳೆಗಾಲ ಕಳೆದನಂತರ ಅಲ್ಲ ತಯಾರು ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ. ರೈತರಿಗೆ ಕೊಂದರೆಯಾಗಬಾರದೆಂದು ಕೇಂದ್ರದಿಂದ ಅನುಮತಿ ಬರುವ ನಿರೀಕ್ಷಣೆಯ ಮೇಲೆ ಎಲ್ಲೆ ಮೀರಿ ಸಹಾಯ ಮಾಡಿ ಅಥಕ್ಕೆ ಒಪ್ಪಿಗೆ ಪಡೆದಿದ್ದೇವೆ!

ಶ್ರೀ ಕೆ. ಪಂಚಾಕ್ಷರಯ್ಯ.—ರೆಗ್ಯುಲರ್ ಕೋಟಾ ಕೊಡಬೇಕಾದವರಿಗೆ ಸಕಾಲದಲ್ಲಿ ಕೊಡದೆ ಎರಡು ತಿಂಗಳಾದಮೇಲೆ ಮಳೆಗಾಲ ಕಳೆದಮೇಲೆ ಗುಳ ಮುಂತಾದ್ದನ್ನು ತಯಾರಿಸುತ್ತಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ವ್ಯವಸಾಯದ ಕೋಟಾ ವಿಚಾರದಲ್ಲ ಫುಡ್ ಪ್ರೊಡಕ್ಷ್ಷ್ ಕಮಿಷನರಿಗೆ ಅಧಿಕಾರ ವಹಿಸಿದೆ. ಅವರು ವ್ಯವಸಾಯದ ಇಲಾಖೆ ಡೈರೆಕ್ಟರು. ವ್ಯವಸಾಯಗಾರರಿಗೆ ಕಬ್ಬಿಣದ ಸಾಮಾನು ಎಷ್ಟು ಬೇಕು, ಯಾವಯಾವ ಪ್ರಮಾಣದಲ್ಲ ಬೇಕು ಎಂದು ತಿಳಿಸಿದರೆ ಅವರು ಅದಕ್ಕೆ ತಕ್ಕಂತೆ ಅಲಾಟ್‌ಮೆಂಟ್ ಕೊಡುತ್ತಾರೆ.

ಶ್ರೀ ಕೆ. ಪಂಚಾಕ್ಷರಯ್ಯ.—ಈ ಕೋಟಾ ಹಂಚು ವಾಗ ಸಂಸ್ಥಾನಾಮಳೆ ಪಕ್ಷಪಾತ ನಡೆಯುತ್ತಿರುವುದು ಸರ್ಕಾರದ ಅವಗಾಹನೆಗೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಪಕ್ಷಪಾತವಾವುದೂ ಕಂಡುಬಂದಿಲ್ಲ. ಫುಡ್ ಪ್ರೊಡಕ್ಷ್ಷ್ ಕಮಿಷನರು ಕೋಟಾ ಹೋಲ್ಡರುಗಳಲ್ಲದವರಿಗೂ ಕೊಡುತ್ತಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ವರ್ಷಕ್ಕೆ ಎಷ್ಟು ಪ್ರಮಾಣದ ವ್ಯವಸಾಯದ ಉಪಕರಣಗಳು ತಯಾರಾಗುತ್ತವೆ?

ಶ್ರೀ ಎಚ್. ಸಿದ್ದವೀರಪ್ಪ.—ನುಮಾರು ಎರಡು ಸಾವಿರ ಟನ್ ಆಗಬೇಕೆಂದು ನಿಗದಿಯಾಗಿದೆ.

ಶ್ರೀ ಬಿ. ಹುಚ್ಚೇಗೌಡ.—ಕಳೆದ ವರ್ಷ ಅದರಲ್ಲ ಕಾಲುಭಾಗ ಕೂಡ ಒದಗಿಸಿಲ್ಲ, ಅಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಬಿ. ಹುಚ್ಚೇಗೌಡ.—ಈ ವರ್ಷ ಕೊಟ್ಟಿರುವುದೂ ಕೂಡ ಕದಮೆಯಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಪರಿಶೀಲಿಸಿ ನರಿಯಾಗಿ ವ್ಯವಸ್ಥೆ ಮಾಡಬೇಕೆಂದು ಆರ್ ಇಂಡಿಯಾ ಕಂಟ್ರೋಲರಿಗೆ ತಿಳಿಸಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಸಾಕಾದಷ್ಟು ನರಬರಾಯಿ ಮಾಡಲು ಭರವಸೆ ಕೊಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಭದ್ರಾವತಿ ಕಬ್ಬಿಣದ ಕಾರ್ಖಾನೆಯಿಂದ ಸಾಕಷ್ಟು ಒದಗಿಸಲು ಪ್ರಯತ್ನ ಮಾಡತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಅನೇಕ ಸೊಸೈಟಿಗಳಿಗೆ ವ್ಯವಸಾಯದ ಉಪಕರಣಗಳು ಬಂದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಯಾವಯಾವ ಸೊಸೈಟಿ ಎಂಬುದನ್ನು ಹೇಳಿದರೆ ಉತ್ತರ ಕೊಡಬಹುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ವ್ಯವಸಾಯ ಮಾಡುವ ಕಾಲ ಮೀರಿದ ಮೇಲೆ ಒದಗಿಸುತ್ತಿರುವುದರಿಂದ ಅನೇಕರಿಗೆ ತೊಂದರೆಯಾಗಿರುವುದು ಸರ್ಕಾರದ ಅವಗಾಹನೆಗೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಪರಿಶೀಲನು ತ್ತೇವೆ. ರೈತರಿಗೆ ಅನುಕೂಲವಾಗುತ್ತದೆಂಬ ದೃಷ್ಟಿಯಿಂದ ಫುಡ್ ಪ್ರೊಡಕ್ಷ್ಷ್ ಕಮಿಷನರಿಗೆ ಇದರ ಜವಾಬ್ದಾರಿ ವಹಿಸಿದ್ದೇವೆ. ತೊಂದರೆಯಾಗಿದ್ದರೆ ನರಿಪಡಿಸೋಣ. ಬೇಕಾದರೆ ಅಖಲಭಾರತ ಕಂಟ್ರೋಲರ್ ಮೂಲಕವೇ ಈ ಕಾರ್ಯ ಮಾಡಿಸೋಣ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ತಾಲ್ಲೂಕು ಸೊಸೈಟಿಗಳಿಗೆ ಕೋಟಾ ಕೊಡದೆ ಸಾಧಾರಣವಾಗಿ ದೊಡ್ಡ ಸೊಸೈಟಿಗಳಿಗೆ, ದೊಡ್ಡ ತಾಲ್ಲೂಕುಗಳಿಗೆ ನರಬರಾಯಿ ಮಾಡುತ್ತಿರುವುದು ಗೊತ್ತೆ?

ಶ್ರೀ ಎಚ್. ಸಿದ್ದವೀರಪ್ಪ.—ಫುಡ್ ಪ್ರೊಡಕ್ಷ್ಷ್ ಕಮಿಷನರನ್ನು ರಿಜಿನ್ವರ್ಡ್ ಡೀಲರ್ ಮಾಡಿ ಅವರು ಹಂಚಲು ವ್ಯವಸ್ಥೆ ಮಾಡಿದೆ. ಅದು ಸರಿಯಲ್ಲವೆಂದು ಮಾನ್ಯ ಸದಸ್ಯರು ಹೇಳಿದರೆ ಪುನಃ ಪರಿಶೀಲಿಸಿ ಅಲ್ಲರುವ ನ್ಯೂನಾತಿರಿಕ್ತಗಳನ್ನು ತಿದ್ದುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಹಳ್ಳಿ ಸೊಸೈಟಿಗಳಿಗೆ ನರಿಯಾಗಿ ಜಾಗ್ರತೆ ಕೊಡುತ್ತಿಲ್ಲ. ಎಲ್ಲಾ ಸೊಸೈಟಿಗಳಿಗೂ ಕೋಟಾ ಸರಿಯಾಗಿ ಸಕಾಲದಲ್ಲಿ ಕೊಡುವಂತೆ ಏರ್ಪಾಡು ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಪರಿಶೀಲಿಸಿ ಇರುವ ನ್ಯೂನತೆಗಳನ್ನು ಹೋಗಲಾಡಿಸಲು ಪ್ರಯತ್ನಿಸೋಣ.

ಶ್ರೀ ಜಿ. ಬನಪ್ಪ.—ಆ ಫುಡ್ ಕಮಿಷನರು ಈ ಕಬ್ಬಿಣವನ್ನು ಅಲಾಟ್‌ಮಾಡುವಾಗ ಸ್ಟಾಕ್ ಎಷ್ಟಿದೆ ಎಂಬುದನ್ನು ನೋಡಿಕೊಂಡು ಅಲಾಟ್ ಮಾಡುತ್ತಾರೋ ಅಥವಾ ಅದನ್ನು ನೋಡದೆ ಹಾಗೇ ಅಲಾಟ್ ಮಾಡುತ್ತಾರೋ?

ಶ್ರೀ ಎಚ್. ಸಿದ್ದವೀರಪ್ಪ.—ನಮಗೆ ಆ ಸ್ಟಾಕಿನ ತೊಂದರೆ ಎಂದೂ ಬಂದಿಲ್ಲ.

ಶ್ರೀ ಜಿ. ಬನಪ್ಪ.—ಹಾಗಾದರೆ ಆ ನಮ್ಮ ಹೊನ್ನಾವರ ತಾಲ್ಲೂಕಿನ ಸೊಸೈಟಿಗಳಿಗೆ ಮೂರು ತಿಂಗಳು ಕಳೆದಾಗ್ಯೂ ಏಕೆ ಕಬ್ಬಿಣ ಸರಬರಾಯಿ ಆಗಿಲ್ಲ?

*Asterisk indicates that the remarks or speeches have not been revised by the Member concerned.

ಶ್ರೀ ಎಚ್. ಸಿದ್ದವೀರಪ್ಪ.—ನೀವು ಇಂಥ ಸೊಸೈಟಿಗೆ ಎಂದು ತಿಳಿಸಿದರೆ ನಾವು ನಾಳೆಯೆ ಕಳುಹಿಸುವಂತೆ ಬರೆಯುತ್ತೇವೆ.

ಶ್ರೀ ಬಿ. ರಾಚಯ್ಯ:—ತಾವು ಈ ಕಬ್ಬಿಣದ ವಿಚಾರವಾಗಿ ಮಾರಾಟ ಮಾಡಲು ಯಾವುದಾದರೂ ಪ್ರೈವೇಟ್ ಏಜೆನ್ಸಿಗೆ ಲೈಸೆನ್ಸ್ ಕೊಟ್ಟಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೆ ಯಾರಿಗೂ ಕೊಟ್ಟಿಲ್ಲ. ಆದರೆ ಇತ್ತೀಚೆಗೆ ಆ ರೀತಿ ಒಬ್ಬ ಖಾಸಗೀ ವರ್ತಕರಿಗೆ ಲೈಸೆನ್ಸ್ ಕೊಟ್ಟಿದ್ದ ವಿಚಾರ ತಿಳಿಯಿತು. ಆ ಕೂಡಲೆ ಆ ರೀತಿ ಕೊಡಕೂಡದೆಂದು ಆಜ್ಞೆಯನ್ನು ಹೊರಡಿಸಲಾಯಿತು.

ಶ್ರೀ ಬಿ. ರಾಚಯ್ಯ.—ಗಾಡಿ ಪಟ್ಟಿಗಳು ಹಳ್ಳಿಯ ರೈತರಿಗೆ ಸರಿಯಾಗಿ ಸಿಕ್ಕದೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಅನೇಕಸಾರಿ ಬಂದಿದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ತಾವೀಗ ಈ ಕಬ್ಬಿಣವನ್ನು ಯಾವ ಸೊಸೈಟಿಗಳಿಗೆ ಸರಬರಾಯಿ ಮಾಡುತ್ತಿದ್ದೀರಿ?

ಶ್ರೀ ಎಚ್. ಸಿದ್ದವೀರಪ್ಪ.—ಯಾವಯಾವ ಸೊಸೈಟಿಗಳು ರಿಜಿಸ್ಟರ್ಡ್ ಆಗಿವೆಯೋ ಅಂಥವುಗಳಿಗೆ ಮಾತ್ರ ಸರಬರಾಯಿ ಮಾಡಲಾಗುತ್ತಿದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಕಬ್ಬಿಣದ ಸಾಮಾನುಗಳನ್ನು ಕೊಳ್ಳಲು ಹೋದವರಿಗೆ ಅವರನ್ನು ಕೇಳಬೇಕು, ಇವರನ್ನು ಕೇಳಬೇಕು, ಎಂದು ಹೇಳಿ ಆ ಜನರು ನಮ್ಮನೆ ಸುತ್ತಾಡುವುದರಲ್ಲೇ ವಿಶೇಷ ಕಾಲ ಹರಣೆಯಾಗುತ್ತಿರುವುದನ್ನು ತಪ್ಪಿಸಲು ತಾವೇನು ವ್ಯವಸ್ಥೆ ಮಾಡಿದ್ದೀರಿ?

ಶ್ರೀ ಎಚ್. ಸಿದ್ದವೀರಪ್ಪ.—ತಾವು ಕೇಳುತ್ತಿರುವ ಅಂಶಗಳು ನನ್ನ ಗಮನಕ್ಕೆ ಬಂದಿವೆ. ಹಾಗೆ ಎಲ್ಲಿ ಒತ್ತಡಕ್ಕೆ ಅವಕಾಶವಾಗಿದೆ, ಎಲ್ಲಿ ತೊಂದರೆ-ಕಿರುಕುಳಗಳುಂಟಾಗುತ್ತಿವೆಯೆಂಬುದನ್ನು ಕ್ಲೂಲಂಕಷವಾಗಿ ಪರಿಶೀಲನೆ ಮಾಡಲು ಮತ್ತು ಅಂಥ ಅನವಶ್ಯಕ ಬಾಬುಗಳಿದ್ದರೆ ಅದನ್ನು ಮಾರ್ಪಾಡು ಮಾಡಲು ಸರ್ಕಾರ ತೀವ್ರವಾಗಿ ಆಲೋಚನೆ ಮಾಡುತ್ತಿದೆ.

Sri MULKA GOVINDA REDDY.—May I know how this agricultural quota is distributed to the ryots?

Sri H. SIDDAVEERAPPA.—So far as the agricultural quota is concerned, in order to see there is proper distribution in the State, the Commissioner for Food Production *cum* Director of Agriculture is registered as a stockist to deal with it. Any allotment to the State is allotted to him. He in turn, makes arrangements for proper distribution of iron either through Co-operative Societies or any other agency which he considers fit.

Sri MULKA GOVINDA REDDY.—Is it a fact that out of 700 tons, 500 tons were allotted to a single merchant in Davangere who is blacklisted?

Sri H. SIDDAVEERAPPA.—Yes, it is a fact and it was brought to my notice. Without the knowledge of the Iron and Steel Controller in Mysore, 500 tons of agricultural scrap were allotted to a blacklisted merchant in Davangere. As soon as I came to know of it, I wrote to Government of India and got it cancelled.

Sri MULKA GOVINDA REDDY.—Does that cancellation order stand now?

Sri H. SIDDAVEERAPPA.—Yes, that order stands and that merchant will not be allowed to deal with since he is blacklisted.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ತೊಂದರೆಗಳನ್ನೆಲ್ಲಾ ಪರಿಶೀಲನೆ ಮಾಡಿ ಪರಿಹಾರ ನೀಡುತ್ತೇವೆಂದು ಹೇಳಿದ್ದೀರಿ. ಆ ಪರಿಹಾರ ನೀಡುವುದಕ್ಕೆ ಇನ್ನೆಷ್ಟು ಕಾಲ ಬೇಕು?

ಶ್ರೀ ಎಚ್. ಸಿದ್ದವೀರಪ್ಪ.—ಆದಷ್ಟು ಜಾಗ್ರತೆಯೇ ನೀಡಲಾಗುತ್ತದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ಕಬ್ಬಿಣದ ಉಪಯೋಗ ಹೆಚ್ಚಾಗಿರುವುದು ಹಳ್ಳಿಯ ಜನರಿಗೆಂಬ ಅಂಶ ತಮಗೆ ಗೊತ್ತಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಅದರ ಉಪಯೋಗ ಎಲ್ಲರಿಗೂ ಇದೆ. ಕಬ್ಬಿಣ ಎಲ್ಲರಿಗೂ ಬೇಕಾದ ವಸ್ತು.

ಶ್ರೀ ಎಚ್. ಕೆ. ಸಿದ್ದಯ್ಯ.—ಇದು ವ್ಯವಸಾಯ ಗಾರರಿಗೆ ವ್ಯವಸಾಯದ ಕಸಬಿಗೆ ಮಾತ್ರವೇ ಹೆಚ್ಚಿಗೆ ಬೇಕಾಗಬಹುದಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಎಚ್. ಕೆ. ಸಿದ್ದಯ್ಯ.—ಒಂದೆರಡು ತಿಂಗಳೊಳಗೇ ಸರಬರಾಯಿಯನ್ನು ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ನಾಳೆ ದಿವಸವೇ ಸಂಬಂಧಪಟ್ಟ ಅಧಿಕಾರಿಗಳನ್ನು ಕೂಡಿಸಿಕೊಂಡು ಇದನ್ನು ತೀರ್ಮಾನಮಾಡುತ್ತೇನೆ. ಆದಷ್ಟು ಬೇಗ ಜನಗಳಿಗಿರತಕ್ಕ ತೊಂದರೆಯನ್ನು ತಪ್ಪಿಸಬೇಕೆಂಬುದೇ ಸರ್ಕಾರದವರ ಉದ್ದೇಶ.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಸಂಬಂಧದಲ್ಲಿ ತಪ್ಪಿತಸ್ಥರಾದ ಅಧಿಕಾರಿಗಳಿಗೆ ಶಿಕ್ಷೆ ಮಾಡುವುದೊಳ್ಳೆಯದಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು ತಪ್ಪಿತಸ್ಥರಿಗೆ ಮಾತ್ರ.

ಶ್ರೀ ಆರ್. ಮುನಿಸ್ವಾಮಯ್ಯ.—ಆ ಶಿಕ್ಷೆಗಳೇನೆಂಬುದರ ಬಗ್ಗೆ ಒಂದು ಪಟ್ಟಿಯನ್ನು ಹಾಕಿಕೊಂಡಿದ್ದೀರಾ? (ನಗು)

(ಉತ್ತರವಿಲ್ಲ)

Sri M. LINGANNA.—May I know the probable position of the stock held by the Director of Agriculture at present?

Sri H. SIDDAVEERAPPA.—As a very special case we made a recommendation to the Government of India and this year they have given us a special allotment of 1,500 tons exclusively for agricultural quota.

Sri M. LINGANNA.—Is it a fact that all the quota is not being distributed and some stock is being withheld?

Sri H. SIDDAVEERAPPA.—The exact stock available I do not know. But it is sought to be disposed of through a private agency which I have already stated.

Sri M. LINGANNA.—Is it a fact that because of high rate, that the stock of these agricultural implements is being held up?

Sri H. SIDDAVEERAPPA.—I cannot definitely say it is due to that fact.

ಶ್ರೀ ವಿ. ಮಸಿಯಪ್ಪ.—ಅನೇಕ ತಾಲ್ಲೂಕುಗಳಲ್ಲಿರುವ ರಿಜಿಸ್ಟರ್ಡ್ ಸೊಸೈಟಿಗಳಿಗೆ ಹಣವನ್ನು ಮುಂಗಡವಾಗಿ ಕಟ್ಟಿದ್ದರೂ ಅನೇಕ ತಿಂಗಳಾದರೂ ಅವರಿಗೆ ಕಬ್ಬಿಣದ ಕೋಟಾ ಸರಬರಾಯಿ ಆಗದಿರುವ ವಿಷಯ ತಮ್ಮ ಗಮನಕ್ಕೆ ಬಂದಿದೆಯೇ?

ಅಧ್ಯಕ್ಷರು.—ಆ ಪ್ರಶ್ನೆಗಾಗಲೇ ಉತ್ತರ ಕೊಟ್ಟಿದ್ದಾರೆ.

ಶ್ರೀ ವಿ. ಮಸಿಯಪ್ಪ.—ಹಣವನ್ನು ಮುಂಗಡವಾಗಿ ಕಟ್ಟಿದ್ದರೂ ಸಾಮಾನುಗಳನ್ನು ಸರಬರಾಯಿ ಮಾಡಿಲ್ಲ ಏಕೆ?

Sri H. SIDDAVEERAPPA.—If the Hon'ble Member brings any specific instance to my notice, I shall look into it.

ಯಾವ ಸೊಸೈಟಿಗೆ ಎಂಬುದನ್ನು ತಿಳಿಸಿದರೆ ನಾಳೆಯೇ ತರಿಸಿಕೊಡುತ್ತೇನೆ.

ಶ್ರೀ ವಿ. ಮಸಿಯಪ್ಪ.—ಈ ವ್ಯವಸಾಯದ ಉಪಕರಣಗಳನ್ನು ತಯಾರಿಸತಕ್ಕವರಿಗೆ ಸ್ಕ್ಯಾಪ್ ಐರ್ಡ್ ಅನ್ನು ಸರಬರಾಯಿ ಮಾಡಿದರೆ ಬೆಲೆಯಲ್ಲಿ ಒಂದಾಣೆ ಕಡಮೆಯಾಗುತ್ತದೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

Sri H. SIDDAVEERAPPA.—The purpose is to make quota available at a cheaper rate to the agriculturists.

ಶ್ರೀ ವಿ. ಮಸಿಯಪ್ಪ.—ಇದನ್ನು ಅಧಿಕ ಪ್ರಮಾಣದಲ್ಲಿ ಮಲ್ಟಪರ್ಪಸ್ ಸೊಸೈಟಿಗಳಿಗೆ ಒದಗಿಸಲು ಪ್ರಯತ್ನ ಮಾಡುತ್ತೀರಾ?

Sri H. SIDDAVEERAPPA.—We shall examine it.

Sri K. S. VASAN.—May I know the name of the blacklisted merchant in Davangere?

Mr. SPEAKER.—Not necessary.

Sri K. S. VASAN.—Let the public know the blacklisted merchant so that they may be careful.

(*No answer*)

ಶ್ರೀ ಟಿ. ಹನುಮಯ್ಯ.—ಮೈಸೂರು ದೇಶದಲ್ಲಿ ನೂರಕ್ಕೆ ತೊಂಭತ್ತು ಭಾಗ ಈ ಕಬ್ಬಿಣದ ಸಾಮಾನುಗಳ ಅವಶ್ಯಕತೆ ಹಳ್ಳಿಯ ರೈತರುಗಳಿಗೆ ಅಧಿಕವಾಗಿರುತ್ತದೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಅಧ್ಯಕ್ಷರು.—ಈಗಾಗಲೇ ಅನೇಕ ಸದಸ್ಯರು ಅನೇಕ ರೀತಿಗಳಲ್ಲಿ ಇದೇ ಪ್ರಶ್ನೆಯನ್ನು ಕೇಳಿದ್ದಾರೆ.

Sri H. SIDDAVEERAPPA.—We have requested 75 Co-operative Societies out of which 45 have already agreed and for the rest we have issued a notice.

ಶ್ರೀ ಟಿ. ಹನುಮಯ್ಯ.—ತಾವು ಹಳ್ಳಿಯ ಸೊಸೈಟಿಗಳಿಗೆ ಕೊಡಿ. ಹಳ್ಳಿ ರೈತರು ಪಟ್ಟಣಗಳಲ್ಲಿರತಕ್ಕ ಸೊಸೈಟಿಗೆ ಬಂದು ಕೊಂಡುಕೊಳ್ಳಲು ಕಷ್ಟವಿದೆ, ಅವರಿಗೆ ಸಾಧ್ಯವಾಗುವುದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಯಾವ ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡುತ್ತಿವೆಯೋ ಅವುಗಳಿಲ್ಲಕ್ಕೂ ಕೊಡೋಣ.

ಶ್ರೀ ಟಿ. ಹನುಮಯ್ಯ.—ಹಾಗಾದರೆ ಆ ಹಳ್ಳಿ ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡುವುದಿಲ್ಲವೆಂದು ತಮ್ಮ ಭಾವನೆಯೇ!

ಶ್ರೀ ಎಚ್. ಸಿದ್ದವೀರಪ್ಪ.—ಅವುಗಳ ವಿಚಾರದಲ್ಲ ನಿಮಗಿಂತಲೂ ಹೆಚ್ಚಿನ ನಮ್ರತೆಯ ಭಾವನೆ ನನ್ನ ಗುಂಟು.

ಶ್ರೀ ಟಿ. ಹನುಮಯ್ಯ.—ಆ ಹಳ್ಳಿಯಲ್ಲಿರತಕ್ಕ ಅನೇಕ ರೈತರಿಗೆ ಸಮರ್ಪಕವಾದ ರೀತಿಯಲ್ಲಿ ಕಬ್ಬಿಣದ ಸಾಮಾನುಗಳು ದೊರೆಯುತ್ತಿಲ್ಲವೆಂಬ ಅಂಶ ತಮ್ಮ ಅವಗಾಹನೆಗೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಹಳ್ಳಿಯವರಿಗೆ ತೊಂದರೆಯಾಗಬಾರದೆಂಬ ತತ್ವವನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ.

Special Revenue Inspectors for Depressed Classes (Discrepancy in pay)

Q.—650. Sri G. PUTTASWAMY (Chikmagalur-Mudigere—Scheduled Castes).—

Will the Government be pleased to state.—

(*a*) whether it has come to their notice that no graded pay is sanctioned to the Special Revenue Inspectors for Depressed Classes;

(*b*) the reason for the disparity between the scale of pay of the Special Revenue Inspectors for Depressed Classes and the scale of pay of the regular Revenue Inspectors of the Taluks in the State;

(*c*) whether they will consider the desirability of revising the scale of pay of the Special Revenue Inspectors for Depressed Classes in the State?

Sri H. M. CHANNABASAPPA. (Minister for Revenue and Agriculture).

(*a*) Yes.

(*b*) The Special Revenue Inspectors for Depressed Classes are given a fixed pay of Rs. 50 per mensem. The regular Revenue Inspectors have larger duties and responsibilities compared to the Special Revenue Inspectors for